## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

ಓ.ಎಸ್.82/2019

ಸಾಕ್ಷಿಯನ್ನು ದಿಃ **02.07.2026** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರಃಶ್ರೀ**. CHS **ವಕೀಲರಿಂದ**:

4ನೇ ಪ್ರತಿವಾದಿ ಆರೋಗ್ಯವಾಗಿಲ್ಲ. ಅವರಿಗೆ ಕಾಲು fracture ಆಗಿ ನಿಂತುಕೊಳ್ಳಲು ಆಗುವುದಿಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. 20 ಗುಂಟೆಯನ್ನು ತಿಮ್ಮೇಗೌಡರಿಂದ ಖರೀದಿಸಿದ್ದೇವೆ. ತಿಮ್ಮೇಗೌಡರ ತಂದೆಯ ಹೆಸರು ಹೊನ್ನೇಗೌಡ. ಹೊನ್ನೇಗೌಡರಿಗೆ 4 ಜನ ಮಕ್ಕಳು. ಖರೀದಿಸಿದ್ದೇವೆ ಎನ್ನುವ 20 ಗುಂಟೆ ಹೊನ್ನೆಗೌಡರ ಹೆಸರಿನಲ್ಲಿತ್ತು ಎಂದರೆ ಇಲ್ಲ. ಹೊನ್ನೇಗೌಡರ ಸದರಿ ಸ್ವತ್ತು ಹೊನ್ನೇಗೌಡರಿಗೆ ಸೇರಿದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮೇಗೌಡರಿಗೆ ಹೇಗೆ ಬಂತು ಎಂದರೆ ಅವರ ತಂದೆಯ ಮೂಲಕ ನೋಂದಾಯಿತ ವಿಭಾಗ ಪತ್ರದ ಮೂಲಕ ಬಂತು. ವಿಭಾಗ ಪತ್ರವನ್ನು ನೋಡಿದ್ದೇನೆ. ವಿಬಾಗ ಪತ್ರಕ್ಕೆ 3 ಮತ್ತು 4ನೇ ವಾದಿಯರು ಸಹಿ ಹಾಕಿಲ್ಲ ಎಂದರೆ ಸರಿ. ಕ್ರಯಪತ್ರಕ್ಕೆ 3 ಮತ್ತು 4ನೇ ವಾದಿಯರ ಸಹಿ ಪಡೆಯಲು ತೊಂದರೆ ಇತ್ತೇ ಎಂದರೆ ತಿಮ್ಮೇಗೌಡರ ಹೆಸರಿನಲ್ಲಿ ಪಕ್ಕಾ ಖಾತೆ ಇದ್ದ ಕಾರಣ ಅವರಿಬ್ಬರ ಸಹಿ ಪಡೆದಿಲ್ಲ. 3ನೇಪ್ರತಿವಾದಿಗೆ ನಾವು ಖರೀದಿಸಿದ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 3ನೇಪ್ರತಿವಾದಿಗೆ ಹೊನ್ನೇಗೌಡರವರು ಮಾವನಾಗಬೇಕು. ವಾದಿಯರಿಗೆ ಮೋಸ ಮಾಡಬೇಕುಎಂದು ನಾವು 2 ಮತ್ತು 3ನೇ ಪ್ರತಿವಾದಿಯರೊಂದಿಗೆ ಶಾಮಿಲಾಗಿ ಕ್ರಯಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳಾಗಿರುವ ಕಾರಣ ವಾದಿಯರಿಗೂ ಕೂಡ ಹಿಸ್ಸೆಯ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಯರ ಸಮ್ಮತಿ ಪಡೆಯದೇ ಮಾಡಿಕೊಂಡ ಕ್ರಯಪತ್ರ ಊರ್ಜಿತವಲ್ಲ ಎಂದರೆ ಸರಿಯಲ್ಲ. 3 ಮತ್ತು 4ನೇ ವಾದಿಯರು ಹೊನ್ನೇಗೌಡರ ಮಕ್ಕಳು ಎಂದು ತಿಳಿದಿದ್ದರೂ ಕೂಡ ಅವರ ಸಮ್ಮತಿಯನ್ನು ಪಡೆಯದೇ ಮಾಡಿಕೊಂಡ ಕ್ರಯಪತ್ರ ಊರ್ಜಿತವಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಂದ ಎಷ್ಟು ವರಮಾನ ಬರುತ್ತದೆ ಎಂದು ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ.

## ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.